**ಓ ಎಸ್ ನಂಃ117/2018**

**ಪಿ. ಡಬ್ಲ್ಯೂ ಃ 1**

**ದಿಃ 10.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃಪ್ರತಿವಾದಿಗಳ ಪರ ಶ್ರೀ ಎಸ್ ಸಿ ಆರ್ ವಕೀಲರಿಂದ**

ನಮ್ಮ ತಾತ ಚಿಕ್ಕರಂಗಯ್ಯ ಇವರು ದಿನಾಂಕ ಃ 24.03.2012 ರಂದು ಭದ್ರಾವತಿಯ ಕ್ವಾಟ್ರರ್ಸ್ ನಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿ. ಆ ಸಮಯದಲ್ಲಿ ಅವರು ಚಿಕ್ಕರಾಜು ಇವರ ಜೊತೆ ವಾಸವಾಗಿದ್ದರು ಎಂದರೆ ಸರಿ. ಸ.ನಂ. 105 ನ್ನು ಸಿ ರಾಜು ಇವರು ನರಸಿಂಹಯ್ಯ ಇವರಿಂದ ಕ್ರಯಕ್ಕೆ ತೆಗೆದುಕೊಂಡಿದ್ದರು ಎಂದರೆ ಸರಿ. ಅದರ ಪೂರ್ತಿ ವಿಸ್ತೀರ್ಣ 1 ಎಕರೆ 30 ಗುಂಟೆ ಇತ್ತು ಎಂದರೆ ಸರಿ. ಅದರ ಪಹಣಿ ಈಗ ನರಸಿಂಹಯ್ಯ ಮತ್ತು ಸಿ ರಾಜು ಇವರ ಹೆಸರಿನಲ್ಲಿ ಜಂಟಿಯಾಗಿ ಬರುತ್ತಿದೆ ಎಂದರೆ ಸರಿ. ಆ ಸ್ವತ್ತಿನಲ್ಲಿ ನರಸಿಂಹಯ್ಯ ಇವರಿಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿ. ಐಟಂ ನಂಬರ್ 1 ಮತ್ತು 2 ಇವುಗಳು ಚಿಕ್ಕಣ್ಣ ಮತ್ತು ಚಿಕ್ಕರಾಜು ಇವರ ಸ್ವಯಾರ್ಜಿತ ಸ್ವತ್ತುಗಳೆಂದರೆ ಸರಿಯಲ್ಲ. ಕ್ರಯಕ್ಕೆ ತೆಗೆದುಕೊಂಡಾಗಿನಿಂದ ಅವರು ಪ್ರತ್ಯೇಕವಾಗಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಆ ಸ್ವತ್ತುಗಳಿಗೆ ಮತ್ತು ನಮಗೆ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನನ್ನ ತಂದೆಗೆ ನಾವು 3 ಜನ ಮಕ್ಕಳಿರುತ್ತೇವೆ. ಎಲ್ಲರ ಮದುವೆ ಆಗಿದೆ. ನನ್ನ ತಮ್ಮಂದಿರಾದ ರಾಜು ಮತ್ತು ಶಿವಣ್ಣ ಮದುವೆಯಾಗಿ ತಮ್ಮ ಸಂಸಾರದ ಜೊತೆಗೆ ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದರೆ ಸರಿ. ಅವರಿಬ್ಬರು ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ಐಟಂ ನಂಬರ್ 5 ರ ಸ್ವತ್ತಿನಲ್ಲಿ ನಾವು ಒಂದು ಶೆಡ್ ಹಾಕಿಕೊಂಡು ವಾಸವಾಗಿದ್ದೇವೆ ಎಂದರೆ ಸರಿ. ಆ ಸ್ವತ್ತಿನಲ್ಲಿ ನಮ್ಮ ತಂದೆಗೆ ಭಾಗ ಬಂದಿತ್ತು ಎಂದರೆ ಸರಿಯಲ್ಲ. ಭಾಗ ಬಂದ ಸ್ವತ್ತಿನಲ್ಲಿ ಶೆಡ್ ಹಾಕಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಈಗ ಶೆಡ್ ಬಿದ್ದು ಹೋಗಿದೆ ಅದು ಪಾಳು ಇರುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ನಮ್ಮ ತಂದೆಯ ದುಡಿಮೆ ನಮ್ಮ ಕುಟುಂಬಕ್ಕೆ ಸಾಕಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಒಟ್ಟು ಕುಟುಂಬದಲ್ಲಿ ಇದ್ದ ಬಗ್ಗೆ ನಾನು ಯಾವುದೆ ದಾಖಲೆಯನ್ನು ಕೊಟ್ಟಿಲ್ಲ. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳೆಂದು ತೋರಿಸಲು ಯಾವುದೆ ದಾಖಲೆ ಕೊಟ್ಟಿಲ್ಲ.

ನಮ್ಮ ತಂದೆಗೆ ಕಲ್ಕೆರೆ ಗ್ರಾಮದಲ್ಲಿ ಒಂದು ಖಾಲಿ ನಿವೇಶನ ಮಂಜೂರಾಗಿತ್ತು ಎಂದರೆ

ಸರಿಯಲ್ಲ. ನಮ್ಮ ತಂದೆ ಕ್ರಯಕ್ಕೆ ತೆಗೆದುಕೂಂಡಿದ್ದಾರೆ. ಬೇರೆಯವರಿಗೆ ಮಂಜೂರಾದ ಸ್ವತ್ತನ್ನು ನಮ್ಮ ತಂದೆ ಕ್ರಯಕ್ಕೆ ತೆಗೆದುಕೊಂಡಿದ್ದರು. ಇರುವ ಮನೆ ಸಾಕಾಗುವುದಿಲ್ಲ ಎಂದು ಬೇರೋಂದು ಮನೆ ಖರೀದಿಸಿದ್ದರು ಎಂದರೆ ಸರಿ. ಅದರ ಕ್ರಯಪತ್ರ ನಮ್ಮ ತಂದೆಯ ಹೆಸರಿನಲ್ಲಿ ಆಗಿರುತ್ತದೆ. ಚಿಕ್ಕರಾಜು ಮತ್ತು ಚಿಕ್ಕಣ್ಣ ಇವರು ಭಾಗ ಮಾಡಿಕೊಂಡು ಭದ್ರಾವತಿ ಹೋಗಿ ವಾಸವಾದ ನಂತರ ಮನೆ ಕೊಂಡು ಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಭಾಗ ಆಗಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಅದರಲ್ಲಿ ಹೆಂಚಿನ ಮನೆ ಕಟ್ಟಿಕೊಂಡು ನಾವು ಮತ್ತು ನಮ್ಮ ತಂದೆ ವಾಸವಾಗಿದ್ದೇವೆ ಎಂದರೆ ಸರಿ. ಅದನ್ನು ಸಾಲ ಪಡೆದು ಕಟ್ಟಿದ್ದೇವೆ. ಅದನ್ನು ನಮ್ಮ ತಂದೆಯ ಹೆಸರಿನಲ್ಲಿ ಸಾಲ ಪಡೆದಿದ್ದೇವೆ. ಹೆಂಚಿನ ಮನೆ ಕಟ್ಟಿ ಸುಮಾರು 20 ವರ್ಷವಾಗಿದೆ. ಐಟಂ ನಂಬರ್ 3 ರಲ್ಲಿ 28 ಗುಂಟೆ ಇದೆ. ಅದರ ಚೆಕ್ ಬಂದಿ ಪೂರ್ವಕ್ಕೆ ತಿಮ್ಮಮ್ಮ , ಪಶ್ಚಿಮಕ್ಕೆ ಮಸೀದಿ , ಉತ್ತರಕ್ಕೆ ರಾಜಣ್ಣ ಇವರ ಆಸ್ತಿ ಮತ್ತು ದಕ್ಷಿಣಕ್ಕೆ ರಂಗಯ್ಯ ಇವರ ಸ್ವತ್ತು ಇದೆ. ದಾವಾ ಐಟಂ ನಂಬರ್ 3 ರಲ್ಲಿ ಯಾವುದೆ ಭಾಗ ಆಗಿಲ್ಲ. ಆ 5 ಗುಂಟೆ ಜಾಗ ನಮ್ಮ ತಂದೆಯ ಭಾಗಕ್ಕೆ ಬಂದ ಸ್ವತ್ತು ಎಂದರೆ ಸರಿಯಲ್ಲ. ಅದರಲ್ಲಿ ಮಾತ್ರ ನಾವು ವ್ಯವಸಾಯ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ದಾವಾ ಐಟಂ ನಂಬರ್ 4 ರ ಪೂರ್ವಕ್ಕೆ ತಿಮ್ಮಮ್ಮನ ಸ್ವತ್ತು , ಪಶ್ಚಿಮಕ್ಕೆ ರಂಗಯ್ಯ ಇವರ ಸ್ವತ್ತು , ಉತ್ತರಕ್ಕೆ ರಂಗರಾಮಯ್ಯ ಇವರ ಆಸ್ತಿ ಮತ್ತು ದಕ್ಷಿಣಕ್ಕೆ ಕೆಂಪುರಯ್ಯ ಇವರ ಮಗ ರಂಗಣ್ಣ ಇವರ ಸ್ವತ್ತು ಇದೆ. ಇದು 6 ಗುಂಟೆ ಇರುತ್ತದೆ. ನಾನು ವಿದ್ಯಾಭ್ಯಾಸ ಮಾಡಿಲ್ಲ, ಓದಲು ಬರೆಯಲು ಬರುವುದಿಲ್ಲ. ವಾದಪತ್ರದಲ್ಲಿ 4ನೆ ಐಟಂ ದಕ್ಷಿಣಕ್ಕೆ ಚಿಕ್ಕಣ್ಣ ಇವರ ಸ್ವತ್ತು ಬರುತ್ತದೆ ಎಂದು ಬರೆಸಿಲ್ಲ. ಅದೇ ರೀತಿ ಪೂರ್ವಕ್ಕೆ ಸರ್ಕಾರಿ ಕಾಲುವೆ ಬರುತ್ತದೆ ಎಂದು ಬರೆಸಿಲ್ಲ. ಐಟಂ ನಂಬರ್ 4 ರಲ್ಲಿ ಎಲ್ಲರ ಭಾಗಕ್ಕೆ ಒಂದೊಂದು ಗುಂಟೆ ಬಂದಿದ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 5 ರ ವಿಸ್ತೀರ್ಣ 40X50 ಅಡಿ ಇರುತ್ತದೆ. ಅದರ ಪೂರ್ವಕ್ಕೆ ಲಕ್ಷ್ಮಮ್ಮ ಇವರ ಮನೆ, ಪಶ್ಚಿಮಕ್ಕೆ ನರಸಿಂಹಯ್ಯ ಇವರ ಮನೆ, ಉತ್ತರಕ್ಕೆ ರೇವಣ್ಣ ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ. ನನ್ನ ವಾದಪತ್ರದಲ್ಲಿ ಉತ್ತರಕ್ಕೆ ರೇವಣ್ಣ ಇವರ ಸ್ವತ್ತು ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದು ಬರೆಸಿಲ್ಲ. ಐಟಂ ನಂಬರ್ 3 ರಿಂದ 5 ಸ್ವತ್ತುಗಳು ಮಾತ್ರ

ಪಿತ್ರಾರ್ಜಿತ ಸ್ವತ್ತುಗಳೆಂದರೆ ಸರಿ. ಚಿಕ್ಕಣ್ಣ ಮತ್ತು ರಾಜಣ್ಣ ಇವರಿಗೆ ಸೇರಿದ ಐಟಂ ನಂಬರ್ 1 ಮತ್ತು 2 ಸ್ವತ್ತುಗಳನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಮಾಡಿದ್ದೇವೆ ಎಂದರೆ

ಸರಿಯಲ್ಲ. ಓ ಎಸ್ 361/2017 ಮತ್ತು ಓ ಎಸ್ 362/2017 ಇವುಗಳನ್ನು ಪ್ರತಿವಾದಿ 1 ಮತ್ತು 2 ರವರು ಹಾಕಿದ ನಂತರ ಈ ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಾತ ಬದುಕಿದ್ದಾಗಲೇ 1980 ರಲ್ಲಿ ಬಾಯಿ ಮಾತಿನಲ್ಲಿ ಭಾಗ ಆಗಿದ್ದರಿಂದ ಯಾವುದೆ ಸ್ವತ್ತಿನಲ್ಲಿ ಭಾಗ ಕೇಳುವ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**